ಮಾಡಲು ಮೆ. ಎಸ್.ಕೆ. ಸ್ಟೀಲ್ ಇಂಡಸ್ಟ್ರೀಸ್, ಬೆಂಗಳೂರು ಇವರಿಗೆ ವಹಿಸಿದ್ದರು. ಧಾರವಾಡ ಮತ್ತು ಬೀದರ್‌ಗಳಲ್ಲಿ ಕಬ್ಬಿಣದ ಮಂಚಗಳನ್ನು ಮಾಡುವವರು ಇದರೂ ಇಲ್ಲಿಗೆ ಏಕೆ ಕೊಟ್ಟಿದ್ದಾರೆ ಎಂಬುದನ್ನು ಮತ್ತು ಈ ವ್ಯವಹಾರದಲ್ಲಿ ಏನಾದರೂ ಅವ್ಯವಹಾರ ನಡೆದಿದೆಯೋ ಎಂಬುದನ್ನು ಪರಿಶೀಲಿಸಿ, ಒಂದು ವೇಳೆ ಏನಾದರೂ ಅವ್ಯವಹಾರ ನಡೆದಿದ್ದಲ್ಲಿ ಆ ಬಗ್ಗೆ ಸಂಬಂಧ ಪಟ್ಟವರ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳಲು ಸರಕಾರ ಹಿಂಜರಿಯುವುದಿಲ್ಲ ಎಂಬುದನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ವೆರಿಕಲ್ ವಲ್ಲಪ್ಪ.—ಈ ಸಾವಿರ ರೂಪಾಯಿ ಬೆಲೆ ಬಾಳುವ ಮಂಚಗಳನ್ನು ಬೆಂಗಳೂರಿನಿಂದ ಧಾರವಾಡ ಮತ್ತು ಬೀದರ್‌ಗೆ ಸಾಗಿಸಲು ೩೦೦ ರೂಪಾಯಿಗಳ ಲಾರಿ ಚಾರ್ಜು ಕೊಡಬೇಕಾಗುತ್ತದೆ. ಇದರ ಬದಲು ಅಲ್ಲಿಯೇ ಕೊಂಡುಕೊಂಡಿದ್ದರೆ ಅಷ್ಟು ಹಣದ ಉಳಿತಾಯ ವಾದರೂ ಆಗುತ್ತಿರಲಿಲ್ಲವೆ ? ಆದುದರಿಂದ ಇನ್ನು ಮುಂದಾದರೂ ಸ್ಥಳೀಯ ಇಂಡಸ್ಟ್ರೀಸ್‌ಗಳಿಗೆ ಉತ್ತೇಜನ ಕೊಡುವ ದಿಸೆಯಲ್ಲಿ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಾಧ್ವರಾಜ್.—ಮಾನ್ಯ ಸದಸ್ಯರು ಕೊಟ್ಟ ಉತ್ತಮವಾದ ಸಲಹೆಯನ್ನು ಸರಕಾರವು ಗಮನದಲ್ಲಿಟ್ಟುಕೊಳ್ಳುತ್ತದೆ ಎಂದು ಹೇಳಬಯಸುತ್ತೇನೆ.

ಪಿರಿಯಾಪಟ್ಟಣದಲ್ಲಿ ಮೇಲ್ಮಟ್ಟಿಯ ನಿರ್ಮಾಣ

೯೮೪. ಶ್ರೀ ಕೆ. ಎನ್. ಕಾಳಮರಿಗೌಡ (ಪಿರಿಯಾಪಟ್ಟಣ) —ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕಣಿಗಾಲು, ಆಲನಹಳ್ಳಿ, ದೊಡ್ಡಬೈಲಾಳು ನಾರಳಪುರ ಈ ಗ್ರಾಮಗಳಲ್ಲಿ ಡೈರೆಕ್ಟ್ ಲೈನ್‌ನಲ್ಲಿ ನೀರನ್ನು ಕೊಡುತ್ತಿದ್ದು ಈ ಗ್ರಾಮಗಳು ಎ.ಆರ್.ಡಬ್ಲ್ಯೂ ಅಥವಾ ಎನ್.ಆರ್.ಡಬ್ಲ್ಯೂ ಯೋಜನೆಗೆ ಒಳಪಡುತ್ತವೆಯೆ ;

ಆ) ಹಾಗಿದ್ದಲ್ಲಿ ಈ ಯೋಜನೆಯಡಿಯಲ್ಲಿ ಒಳಪಡುವ ಗ್ರಾಮಗಳು ಯಾವುವು ?

ಇ) ಈ ಗ್ರಾಮಗಳಿಗೆ ಓವರ್ ಹೆಡ್ ಟ್ಯಾಂಕ್ ಯಾವಾಗ ಕಟ್ಟಿಸಲಾಗುವುದು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್, ವಾರ್ತಾ ಮತ್ತು ಪ್ರಚಾರ ಇಲಾಖೆ ಸಚಿವರು).—

ಅ) ಮತ್ತು ಆ) ಈ ಎಲ್ಲಾ ೪ ಗ್ರಾಮಗಳಲ್ಲೂ, ಮೇಲ್ಮಟ್ಟದ ಟ್ಯಾಂಕ್‌ಗಳಲ್ಲದೆ ನೇರವಾಗಿ ಜಲ ಘೂಲದಿಂದ ಪಂಪ್ ಮಾಡಿ ನೀರನ್ನು ನಳನೀರು ಸರಬರಾಜು ಯೋಜನೆಯ ಮೂಲಕ ಒದಗಿಸಲಾಗಿದೆ.

ಇ) ದೊಡ್ಡ ಬೈಲಾಳು ಮತ್ತು ನಾರಳಪುರ ಗ್ರಾಮಗಳಲ್ಲಿ ನಳ ನೀರು ಸರಬರಾಜು ಯೋಜನೆಗಳ ಹೆಚ್ಚಳಿಕೆಯನ್ನು ೧೯೭೦-೭೧ನೇ ಸಾಲಿನಲ್ಲಿ ಮೇಲ್ಮಟ್ಟದ ಟ್ಯಾಂಕುಗಳನ್ನು ಪಂಪಿಗೆಯೊಂದಿಗೆ ತೆಗೆದುಕೊಳ್ಳಲಾಗುವುದು. ಕಣಿಗಾಲು ಮತ್ತು ಆಲನಹಳ್ಳಿಗಳಲ್ಲಿ ಈ ಕೆಲಸಗಳನ್ನು ೧೯೭೧-೭೨ನೇ ಸಾಲಿನ ಯೋಜನೆಯಲ್ಲಿ ಪ್ರಸ್ತಾಪಿಸಲಾಗುವುದು.

ಶ್ರೀ ಕೆ.ಎಸ್. ಕಾಳಮರಿಗೌಡ.—ಮಾನ್ಯ ಅಧ್ಯಕ್ಷರೆ, ನಮ್ಮ ಪಿರಿಯಾಪಟ್ಟಣ ತಾಲ್ಲೂಕಿನ ನಾಲ್ಕು ಗ್ರಾಮಗಳಿಗೆ ಡೈರೆಕ್ಟ್ ಆಗಿ ನೀರು ಕೊಡುವ ವ್ಯವಸ್ಥೆ ಇದೆ. ಆಲನಹಳ್ಳಿ, ದೊಡ್ಡ ಬಾಳೂರು ನಾರಳಾಪುರ, ಮತ್ತು ಕಣಗಾಲು ಗಳಿಗೆ ಡೈರೆಕ್ಟ್ ಲೈನ್ ಇದೆ. ಆದರೆ ''ಆ'' ಪ್ರಶ್ನೆಗೆ ಉತ್ತರವನ್ನು ಕೊಟ್ಟಿಲ್ಲ. ಈ ಗ್ರಾಮಗಳು ಸರಕಾರದವರು ನಿಗದಿಪಡಿಸಿದ ಜನಸಂಖ್ಯೆಯ ಪ್ರಮಾಣದಲ್ಲಿ ಬರುವ ಎ.ಆರ್.ಡಬ್ಲ್ಯೂ, ಅಥವಾ ಎನ್.ಆರ್.ಡಬ್ಲ್ಯೂ. ಯೋಜನೆಗೆ ಒಳಪಡುತ್ತದೆಯೋ ಇಲ್ಲವೋ ಎಂದು ತಿಳಿಸಬೇಕು. ಆಲನಹಳ್ಳಿ ಮತ್ತು ಕಣಗಾಲು ಇಲ್ಲಿ ೩೦೦೦ ಜನಸಂಖ್ಯೆ ಇದ್ದು ಇಲ್ಲಿ ಡೈರೆಕ್ಟ್ ಲೈನ್ ಹಾಕಿದ್ದರೂ ಓವರ್‌ಹೆಡ್ ಟ್ಯಾಂಕ್‌ನ ಅವಶ್ಯಕತೆ ಇದೆ. ಆದುದರಿಂದ ನಿಯಮಾನುಸಾರ ಇದನ್ನು ಒದಗಿಸಲು ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ.ವೈ.ಘೋರ್ಪಡೆ.—ಕಣಗಾಲು ಮಂತ್ತು ಆಲನಹಳ್ಳಿಗಳಿಗೆ ೧೯೯೦—೯೨ರಲ್ಲಿ ನಮ್ಮ ಕಾರ್ಯಕ್ರಮದ ಪ್ರಕಾರ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ದೊಡ್ಡಬ್ಯಾಳೂರು ಮತ್ತು ನಾರಳಾಪುರಗಳು ಸಣ್ಣ ಗ್ರಾಮಗಳಾದರೂ ಕೂಡ ಈ ಕೆಲಸಕ್ಕಾಗಿ ಸೈಟ್‌ನ್ನು ತೆಗೆದುಕೊಳ್ಳಲಾಗಿದೆ. ಓವರ್‌ಹೆಡ್ ಟ್ಯಾಂಕ್ ಹಾಕಿದ್ದರೂ ಕೂಡ ೧೯೭೫ರಲ್ಲಿ ಪೈಪ್ಡ್ ವಾಟರ್ ವ್ಯವಸ್ಥೆ ಈ ನಾಲ್ಕು ಹಳ್ಳಿಗಳಲ್ಲಿ ಆಗಿತ್ತು. ಈಗ ಮಾನ್ಯ ಸದಸ್ಯರು ಕೇಳಿರುವುದು ಎನ್‌ಆರ್‌ಡಬ್ಲ್ಯೂಗೆ ಇದನ್ನು ಸೇರಿಸಿ ಓವರ್‌ಹೆಡ್ ಟ್ಯಾಂಕ್ ಮಾಡುತ್ತೀರಾ ಎಂದು. ಈ ಎರಡು ಹಳ್ಳಿಗಳಿಂದ ಸ್ವಲ್ಪ ಕಾಂಟ್ರಿಬ್ಯೂಷನ್ಸ್ ಬಂದಿದೆ, ಅದನ್ನು ಸ್ವಾಗತ ಮಾಡುತ್ತೇನೆ. ಈಗ ಎಲ್ಲಿ ಕಾಂಟ್ರಿಬ್ಯೂಷನ್ ಬಂದಿದೆ ಆ ಎರಡು ಹಳ್ಳಿಗಳಲ್ಲಿ ಇದೇ ವರ್ಷ ಕೆಲಸ ನಡೆಸಿ, ಬೇರೆ ಎರಡು ಹಳ್ಳಿಗಳಲ್ಲಿ ಜನಸಂಖ್ಯೆ ಜಾಸ್ತಿ ಇದೆ ಎಂದು ಹೇಳಿದ್ದಾರೆ. ಆ ಹಳ್ಳಿಗಳಲ್ಲಿ ಮುಂದಿನವರ್ಷ ಓವರ್‌ಹೆಡ್ ಟ್ಯಾಂಕ್ ಮಾಡುವ ಕೆಲಸ ಮತ್ತು ಪೈಪ್ಡ್ ವಾಟರ್ ಸಪ್ಲೈ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು.—ಶ್ರೀ ಜಯಚಂದ್ರ ಅವರೇ ನಿಮ್ಮ ಪ್ರಶ್ನೆಯನ್ನು ಹೆಚ್‌ಯುಡಿಗೆ ವರ್ಗ ಮಾಡಲಾಗಿದೆ.

ಹಾಸನ ಜಿಲ್ಲೆಯಲ್ಲಿ ಕುಡಿಯಲು ನೀರಿನ ತೊಂದರೆ ಬಗ್ಗೆ

೧೦೯೦ ಶ್ರೀ ಕೆ.ಎಚ್. ಹನುಮೇಗೌಡ (ಹಾಸನ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ

ಅ) ಹಾಸನ ಕ್ಷೇತ್ರದ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದ್ದು ಜನರು ಕಷ್ಟಕ್ಕೆ ಗುರಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ಗ್ರಾಮಗಳಿಗೆ ಕುಡಿಯುವ ನೀರಿನ ಅಭಾವವನ್ನು ತಪ್ಪಿಸಲು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಲಿದೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ಹೌದು ೨೯ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ.

ಆ) ೧೯೯೦—೯೧ನೇ ಸಾಲಿನ ಕ್ರಿಯಾತ್ಮಕ ಯೋಜನೆಯಲ್ಲಿ ೯ ಗ್ರಾಮಗಳಲ್ಲಿ ಹೊಸ ಕೊಳವೆಬಾವಿಗಳನ್ನು ಮಂಜೂರು ಮಾಡಲಾಗಿದೆ. ಮಿಕ್ಕ ಕೊಳವೆ ಬಾವಿಗಳನ್ನು ಅಭಾವ ಯೋಜನೆಯಲ್ಲಿ ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿದೆ.

ಶ್ರೀ ಕೆ ಹೆಚ್. ಹನುಮೇಗೌಡ.— ಹಾಸನ ಕ್ಷೇತ್ರದಲ್ಲಿ ೨೯ ಗ್ರಾಮಂಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆಯೆಂದು ಇವರೇ ಒಪ್ಪಿಕೊಂಡಿದ್ದಾರೆ ಸುಮಾರು ೫೦—೬೦ ಹಳ್ಳಿಗಳಲ್ಲಿ ಈ ಸಮಸ್ಯೆ ಇದೆ ನಾನು ೧೫—೨೦ ಕಾಗದ ಬರೆದಿದ್ದೇನೆ ಸಚಿವರನ್ನು ಕಂಡಿದ್ದೇನೆ ಏನೂ ಪ್ರಯೋಜವಾಗಲಿಲ್ಲ, ಮೊನ್ನೆ ಹೆಬ್ಬಟ್ಟದ ದಿವಸ ಹಳ್ಳಿಯವರು ಮನೆ ಹತ್ತಿರ ಬಂದು ಗಲಾಟೆ ಮಾಡಿದರು. ಆಗ ನಾನು ಡಿ.ಸಿ ಯವರಿಗೆ ಹೇಳಿ ಲಾರಿಯಲ್ಲಿ ನೀರು ಕಳಿಸಿದ್ದೇನೆ. ಹಳ್ಳಿಗಳಿಗೆ ಇಷ್ಟೆಲ್ಲ ತೊಂದರೆ ಇದ್ದರೂ ಇದುವರೆಗೂ ಒಂದು ಊರಿಗೂ ಕುಡಿಯುವ ನೀರು ಕೊಟ್ಟಿಲ್ಲ ಕುಡಿಯುವ ನೀರಿಗೆ ಇಷ್ಟು ತೊಂದರೆ ಯಾದರೆ ಹೇಗೆ? ಎರಡು ಮೂರು ಮೈಲಿಯಿಂದ ತರಬೇಕು. ಒಳ್ಳೆಯ ನೀರು ಸಿಗುವುದಿಲ್ಲ. ನಮ್ಮ ಕಡೆ ಹೋದ ವರ್ಷ ಗೌರಿ ಹಬ್ಬದಲ್ಲಿ ಮಳೆಯಾದದ್ದು ಇನ್ನೂವರೆಗೂ ಮಳೆಯಿಲ್ಲ. ನೀರಿನ ಬಾವಿಗಳೆಲ್ಲ ಒಣಗಿಹೋಗಿದೆ ಬೋರ್ ವೆಲ್ ಕೂಡ ಡ್ರೈ ಆಗಿವೆ. ಇಷ್ಟೆಲ್ಲ ತೊಂದರೆ ಇದ್ದರೂ ಸರ್ಕಾರ ಏನೂ ಕ್ರಮ ಕೈಗೊಳ್ಳಲಿಲ್ಲ, ಮಿಕ್ಕ ಕೊಳವೆ ಬಾವಿಗಳನ್ನು ಅಭಾವ ಯೋಜನೆಯಲ್ಲಿ ತೆಗೆದುಕೊಳ್ಳಲಾಗುವುದೆಂದಿದ್ದಾರೆ ಅಭಾವ ಯಾವಾಗ ಬರುವುದು ? ಆಂದರೆ ಅಭಾವ ಬಂದು ಗ್ರಾಂಟ್ ಬಂದ ಮೇಲೆ ಇವರಂ ಮನಸ್ಸು ಮಾಡಿದ ಮೇಲೆ ಕೆಲಸ ತೆಗೆದುಕೊಳ್ಳುವುದಾದರೆ ಅಲ್ಲಿಯವರೆಗೆ ಆ ಬಡಪಾಯಿಗಳ ಗತಿ ಏನಾಗಬೇಕು ? ಮತ್ತೆ ಜಿಲ್ಲಾ ಪರಿಷತ್ತಿಗೆ ಎಲ್ಲೆಲ್ಲಿ ವೋಟ್ ಬರಲಿಲ್ಲವೊ ಅಂಥ ಹಳ್ಳಿಗಳಂ ಇವು. ಅಲ್ಲಿನ ಚೀಫ್ ಸೆಕ್ರೆಟರಿ ಇಲ್ಲಿನ ಚೀಫ್ ಸೆಕ್ರೆಟರಿಗಿಂತ ದೊಡ್ಡವರಾಗಿಬಿಟ್ಟಿದ್ದಾರೆ. ಇಲ್ಲಿನ ಅಧ್ಯಕ್ಷರಂತೂ ಮುಖ್ಯಮಂತ್ರಿಗಳಿಗಿಂತ ದೊಡ್ಡವರು, ಆ ಕಥೆ ಹೇಳಬಾರದು ? ಇದು ನಮಗೆ ನರಕದಂತೆ ಆಗಿದೆ.

ಶ್ರೀ ಎಂ.ವೈ. ಘೋರ್ಪಡೆ .—ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಈ ವರ್ಷ ೭ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್‌ಗಳು ಮತ್ತು ೫೦ ವಾಟರ್ ಸ್ಕೀಮ್‌ಗಳು ಎಂದು ೧೨ ಯೋಜನೆಗಳು ಇವೆ. ಅಲ್ಲದೆ ೨೬ ಬೋರ್‌ವೆಲ್ಸ್